

ಹಿಡಿಯುವುದಿಲ್ಲ, ಬಣ್ಣ ಹಚ್ಚಬೇಕಿಲ್ಲ, ಒಂದೆಡೆಯಿಂದ ಇನ್ನೊಂದೆಡೆ ಸಾಗಿಸಲು ಹೆಚ್ಚಿನ ಪ್ರಯಾಸಪಡಬೇಕಿಲ್ಲ – ಈ ಗುಣಗಳು ಕಟ್ಟಡದ ಎಂಜಿನಿಯರ್‌ಗಳ ಕಣ್ಣುಗಳು ಪ್ಲಾಸ್ಟಿಕ್‌ನತ್ತ ಹೊರಳಲು ಕಾರಣವಾಗಿವೆ. ಕಟ್ಟಡಕ್ಕೆ ನೀರಿನ ಹಾಗೂ ಚರಂಡಿ ಸಂಪರ್ಕ ಕಲ್ಪಿಸಲು ಲೋಹದ ಪೈಪ್‌ಗಳ ಬಳಕೆ ಈಗ ನಿಂತೇಹೋಗಿದೆ ಎನ್ನುವಷ್ಟು ತಗ್ಗಿದೆ. ಅದರ ಬದಲು ಪಿವಿಸಿ (ಪ್ಲಾಸ್ಟಿಕ್) ಪೈಪ್‌ಗಳ ಉಪಯೋಗ ಹೆಚ್ಚಾಗಿದೆ.

ಎಲ್ಲೆಲ್ಲಿ ಎಲೆಕ್ಟ್ರಿಕ್ ಸಾಮಗ್ರಿಗಳಿವೆಯೋ ಅಲ್ಲೆಲ್ಲ ಪ್ಲಾಸ್ಟಿಕ್ ಇದ್ದೇ ಇರುತ್ತದೆ. ರೆಫ್ರಿಜರೇಟರ್, ವಾಶಿಂಗ್ ಮಷಿನ್, ಮೈಕ್ರೊ ವೇವ್ ಓವನ್, ಟಿ.ವಿ, ಕಂಪ್ಯೂಟರ್, ಅಷ್ಟೇ ಏಕೆ, ನಿಮ್ಮ ಕೈಯಲ್ಲಿರುವ ಮೊಬೈಲ್... ಎಲ್ಲದರಲ್ಲೂ ಪ್ಲಾಸ್ಟಿಕ್ ಇದೆ. ಒಮ್ಮೆ ಊಹಿಸಿ ನೋಡಿ, ಮನೆಯಲ್ಲಿ ಎಳೆದ ವೈರ್ ಮೇಲೆ ಒಂದುವೇಳೆ ಪ್ಲಾಸ್ಟಿಕ್ ಹೊದಿಕೆ ಇಲ್ಲದಿದ್ದರೆ ಏನಾಗುತ್ತಿತ್ತು ಎಂದು. ವಿದ್ಯುತ್ ಪ್ರವಹಿಸುವ ಲೋಹದ ತಂತಿಗಳು ಹೊದಿಕೆಗಳಿಲ್ಲದೆ ಮುಕ್ತವಾಗಿ ಇದ್ದಿದ್ದರೆ ನಾವುಗಳೆಲ್ಲ ಸುರಕ್ಷಿತವಾಗಿರಲು ಸಾಧ್ಯವಿತ್ತೇ?

ಕಡಿಮೆ ವೆಚ್ಚದ ಹಾಗೂ ಹೆಚ್ಚು ಸುರಕ್ಷಿತವಾದ ಸಾರಿಗೆ ಸಾಧನಗಳಿಗಾಗಿ ವಾಹನ ಉತ್ಪಾದಕ ಕಂಪನಿಗಳು ಕೂಡ ಪ್ಲಾಸ್ಟಿಕ್ ಮೇಲೆ ಹೆಚ್ಚಾಗಿ ಅವಲಂಬನೆಯಾಗಿವೆ. ವಾಹನಗಳ ವೇಗವೃದ್ಧಿಗೆ ಲಘುತೂಕದ ಸಾಮಗ್ರಿಗಳನ್ನು ಹೆಚ್ಚಾಗಿ ಬಳಕೆ ಮಾಡಲಾಗುತ್ತಿದ್ದು, ಪ್ಲಾಸ್ಟಿಕ್‌ನಿಂದಾಗಿ ಈಗಿನ ಕಾರುಗಳು 'ತೂಕ ಇಳಿಸಿಕೊಂಡಿವೆ'. ಯಾವುದೇ ವಾಹನ ಓಡಲು ಇಂಧನ ಬೇಕೇಬೇಕು. ವಾಹನದ ಭಾರ ಹೆಚ್ಚಾಗಿದ್ದಷ್ಟೂ ಬಳಕೆಯಾಗುವ ಇಂಧನದ ಪ್ರಮಾಣ ಕೂಡ ಅಧಿಕವಾಗುತ್ತದೆ. ಎಲ್ಲ ವಿಧದ ವಾಹನಗಳು (ರೈಲು ಸಹ) ಪ್ಲಾಸ್ಟಿಕ್‌ನಿಂದ ತೂಕ ಕಳೆದುಕೊಳ್ಳುತ್ತಿರುವ ಕಾರಣ ಇಂಧನ ಬಳಕೆಯ ಕ್ಷಮತೆ ಹೆಚ್ಚಾಗುತ್ತಿದೆ. ಕಾರಿನ ಉದಾಹರಣೆಯನ್ನೇ ತೆಗೆದುಕೊಂಡರೆ ಹಿಂದೆ ಅದರ ನಿರ್ಮಾಣಕ್ಕಾಗಿ ಸಾವಿರ ಕೆ.ಜಿ. ಲೋಹ ಬಳಕೆ ಆಗುತ್ತಿತ್ತು. ಅದೇ ಕಾರನ್ನು ಈಗ 105 ಕೆ.ಜಿ ಪ್ಲಾಸ್ಟಿಕ್ ಬಳಸಿ ನಿರ್ಮಾಣ ಮಾಡಲು ಸಾಧ್ಯವಾಗಿದೆ. ಇದರಿಂದ ಶೇ 7.5ರಷ್ಟು ಇಂಧನ ಉಳಿತಾಯ ಮಾಡಲಾಗುತ್ತಿದೆ.

ವಿಮಾನಗಳ ಹಾರಾಟದಲ್ಲಿ ಏರೋಡೈನಾಮಿಕ್ ತಂತ್ರಜ್ಞಾನದ ಪ್ರತೀ ಅಗತ್ಯಕ್ಕೆ ಸ್ಪಂದಿಸುವುದು ಮುಖ್ಯ. ಬಯಸಿದಂತಹ ವಿಮಾನದ ವಿನ್ಯಾಸವನ್ನು ಪ್ಲಾಸ್ಟಿಕ್‌ನಿಂದ ಮಾತ್ರ ಮಾಡಲು ಸಾಧ್ಯ. ಲಘುತೂಕದ ಕಾರಣ ವೈಮಾನಿಕ ಕ್ಷೇತ್ರದಲ್ಲೂ ಪ್ಲಾಸ್ಟಿಕ್ ಬೇಡಿಕೆಯನ್ನು ಹೆಚ್ಚಿಸಿದೆ. ಜಪಾನ್, ಚೀನಾ ಸೇರಿದಂತೆ ಜಗತ್ತಿನ ವಿವಿಧ ದೇಶಗಳಲ್ಲಿ ಶರವೇಗದಲ್ಲಿ ಓಡುವ ರೈಲುಗಳು ಸಹ ಪ್ಲಾಸ್ಟಿಕ್‌ಮಯವಾಗಿವೆ. ಸಬ್‌ಮರೀನ್‌ಗಳ ನಿರ್ಮಾಣದಲ್ಲೂ ಕೂಡ ಪ್ಲಾಸ್ಟಿಕ್ ತಂತ್ರಜ್ಞಾನ ಅಡಿಯಿಟ್ಟಿದೆ.

ಬೆಂಗಳೂರು, ಮುಂಬೈ, ನವದೆಹಲಿ, ಕೋಲ್ಕತ್ತ ಸೇರಿದಂತೆ ದೇಶದ ಯಾವುದೇ ಮಹಾನಗರವನ್ನು ನೋಡಿ, ಎಲ್ಲೆಡೆ ಈಗ ತ್ಯಾಜ್ಯ ವಿಲೇವಾರಿ ಸಮಸ್ಯೆ. ಈ ತ್ಯಾಜ್ಯದಲ್ಲಿ ಪ್ಲಾಸ್ಟಿಕ್ ಬ್ಯಾಗ್‌ಗಳ ಹಾವಳಿ ಹೆಚ್ಚು ಎನ್ನುವ ದೂರು ಸಾಮಾನ್ಯ. ಕಳಪೆ ಬ್ಯಾಗ್‌ಗಳಿಂದ ಪರಿಸರದ ಮೇಲೆ ದುಷ್ಪರಿಣಾಮ ಆಗುತ್ತಿರುವುದು ನಿಜ. ಆದರೆ, ಮಿಕ್ಕ ಕ್ಷೇತ್ರಗಳಲ್ಲಿ ಪ್ಲಾಸ್ಟಿಕ್ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ಅಲ್ಲದೆ, ಅದನ್ನು ಪರಿಸರಕ್ಕೆ ಪೂರಕವಾಗಿ ಬಳಕೆ ಮಾಡುವಂತೆ ಒಗ್ಗಿಸುವ ಪ್ರಯತ್ನಗಳು ಸಹ ಜೋರಾಗಿ ನಡೆದಿವೆ.



ನಮ್ಮ ರಸ್ತೆಗಳಿಗೆ ನೀರು ಕಂಡರೆ ಎಷ್ಟೊಂದು ಭಯವೆಂದರೆ ಹಾಕಿದ ದಪ್ಪ ಗಾತ್ರದ ಟಾರು ಒಂದೇ ಮಳೆಗೆ ಕಿತ್ತು ಹೋಗುತ್ತದೆ. ಮಳೆ ನೀರು ರಸ್ತೆಯ ಒಡಲೊಳಗೆ ಇಳಿದು ಅಡಿ ಅಡಿಗೂ ಗುಂಡಿಗಳು ಏಳುತ್ತವೆ. ರಸ್ತೆಗಳ ಈ ನೀರಿನ 'ಭಯ' ಹೋಗಲಾಡಿಸಲು ಪ್ಲಾಸ್ಟಿಕ್ ರಸವೇ ಉತ್ತಮ 'ಔಷಧಿ' ಎನ್ನುವುದು ತಜ್ಞರ ಅಭಿಪ್ರಾಯ. ರಾಜ್ಯದ ಕೆಲವು ರಸ್ತೆಗಳಲ್ಲಿ ಈಗಾಗಲೇ ಟಾರಿನ ಜತೆ ಪ್ಲಾಸ್ಟಿಕ್

## ಗುಣಮಟ್ಟದ ಮೇಲೆ ಶ್ರೇಯಾಂಕ

ಪ್ರತಿಯೊಂದು ವಿಧದ ಪ್ಲಾಸ್ಟಿಕ್‌ನ ಗುಣಮಟ್ಟಕ್ಕೆ ತಕ್ಕಂತೆ ಅವುಗಳಿಗೆ 1ರಿಂದ 7ರವರೆಗೆ ಶ್ರೇಯಾಂಕ ಸಂಖ್ಯೆ ನೀಡಲಾಗುತ್ತದೆ. ಯಾವುದೇ ಪ್ಲಾಸ್ಟಿಕ್ ಸಾಮಗ್ರಿ ಸಿದ್ಧಪಡಿಸಿದಾಗ ಈ ಶ್ರೇಯಾಂಕ ಸಂಖ್ಯೆ ಹಾಕುವುದು ಕಡ್ಡಾಯ. ಜನಸಾಮಾನ್ಯರು ಆ ಸಂಖ್ಯೆಗಳನ್ನು ನೋಡಿ ಮನೆಯಲ್ಲಿಯೇ ಪ್ಲಾಸ್ಟಿಕ್ ತ್ಯಾಜ್ಯ ಪ್ರತ್ಯೇಕಗೊಳಿಸಲು ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ಈ ಸಂಖ್ಯೆ ನೀಡಲಾಗುತ್ತದೆ. ಆಯಾ ಶ್ರೇಯಾಂಕದಲ್ಲಿ ಸಾಮಾನ್ಯವಾಗಿರುವ ಸರಕುಗಳ ಮಾಹಿತಿ ಇಲ್ಲಿದೆ:

- **ನಂ. 1 ಪಾಲಿಥಿಲಿನ್ ಟೆರೆಪ್ಯಾಥ್ಲೇಟ್ (ಪಿಇಟಿ)**
  ನೀರು, ತಂಪುಪಾನೀಯ ಹಾಗೂ ಬೀರ್ ಬಾಟಲಿಗಳು, ಅಡುಗೆ ಎಣ್ಣೆ ಕಂಟೇನರ್‌ಗಳು, ಓವನ್‌ನಲ್ಲಿ ಬಳಕೆ ಮಾಡುವ ಟ್ರೇಗಳು
- **ನಂ. 2 ದಟ್ಟ ಸಾಂದ್ರತೆಯುಳ್ಳ ಪಾಲಿಥಿಲಿನ್ (ಎಚ್‌ಡಿಪಿಇ)**
  ಜ್ಯೂಸ್ ಬಾಟಲಿಗಳು, ಫಿನಾಯಿಲ್–ಶ್ಯಾಂಪು ಕಂಟೇನರ್‌ಗಳು, ಮೋಟಾರ್ ಆಯಿಲ್ ಬಾಟಲಿಗಳು
- **ನಂ. 3 ಪಾಲಿವಿನೈಲ್ ಕ್ಲೋರೈಡ್ (ಪಿವಿಸಿ)**
  ಆಹಾರದ ಪ್ಯಾಕಿಂಗ್ ಸಾಮಗ್ರಿಗಳು, ವೈರ್ ಜಾಕೆಟ್‌ಗಳು, ವೈದ್ಯಕೀಯ ಉಪಕರಣಗಳು, ಪೈಪ್‌ಗಳು
- **ನಂ. 4 ಕಡಿಮೆ ಸಾಂದ್ರತೆಯುಳ್ಳ ಪಾಲಿಥಿಲಿನ್ (ಎಲ್‌ಡಿಪಿಇ)**
  ಬ್ಯಾಗ್‌ಗಳು, ಪೀಠೋಪಕರಣಗಳು, ಕಾರ್ಪೆಟ್‌ಗಳು
- **ನಂ. 5 ಪಾಲಿಪ್ರೊಪೆಲಿನ್ (ಪಿಪಿ)**
  ಸಿರಪ್ ಮತ್ತು ಕೆಚಪ್ ಬಾಟಲಿಗಳು, ಕ್ಯಾಪ್‌ಗಳು, ಸ್ಟ್ರಾಗಳು, ಔಷಧಿ ಬಾಟಲಿಗಳು
- **ನಂ. 6 ಪಾಲಿಸ್ಟೆರಿನ್ (ಪಿಎಸ್)**
  ಪ್ಲೇಟ್‌ಗಳು, ಕಪ್‌ಗಳು, ಮಾಂಸದ ಟ್ರೇಗಳು, ಕಾಂಪ್ಯಾಕ್ಟ್ ಡಿಸ್ಕ್‌ಗಳು
- **ನಂ. 7 ಇತರೆ:**
  ಸನ್‌ಗ್ಲಾಸ್‌ಗಳು, ಡಿವಿಡಿಗಳು, ಐಪಾಡ್‌ಗಳು, ಕಂಪ್ಯೂಟರ್ ಕೇಸ್‌ಗಳು.